**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಚೇತನ್ | ಫ್ರಾಸಾ-6 |
| ತಂದೆಯ ಹೆಸರು | : ಹೆಚ್.ವಿ.ಜಯರಾಮ್ | ಚಾಸಾ-10 |
| ವಯಸ್ಸು | : 51 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ENT | ದಿನಾಂಕಃ30.09.2024 |
| ವಾಸಸ್ಥಳ | : ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು 2007 ರಿಂದ ಇಲ್ಲಿಯವರೆಗೂ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.29.11.2022 ರಂದು ಕಳಸ ಪೋಲಿಸರು ಕಳುಹಿಸಿಕೊಟ್ಟ ಎರಡು ಪತ್ರಗಳನ್ನು ಸ್ವೀಕರಿಸಿಕೊಂಡು ಅದರಂತೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಚಾಸಾ-2 ರವರ ಟೀ ಶರ್ಟ್ ಮತ್ತು ಬರ್ಮೋಡವನ್ನು ಸಂಗ್ರಹಿಸಿ RFSL ರವರಿಗೆ ಪತ್ರವನ್ನು ಬರೆದು ಪೋಲಿಸರಿಗೆ ಕೊಟ್ಟಿರುತ್ತೇನೆ. ಅದೇದಿನ ಚಾಸಾ-2 ರವರ ರಕ್ತದ ಮಾದರಿಯನ್ನು ಪರೀಕ್ಷಿಸಿ ಈ ಸಂಬಂಧ ವರದಿಯನ್ನು ಸಹಾ ನೀಡಿರುತ್ತೇನೆ.

ಸಾಕ್ಷಿಯು ದಿ.28.11.2022 ರ ಎರಡು ಪತ್ರಗಳನ್ನು ನೋಡಿ ಅದರಲ್ಲಿ ತಮ್ಮ ಸಹಿಗಳನ್ನು ಗುರುತಿಸಿ ಎಂ.ಒ.1 ಮತ್ತು 2 ನ್ನು ಚಾಸಾ-2 ರವರಿಂದ ಸಂಗ್ರಹಿಸಿಕೊಟ್ಟ ಬಗ್ಗೆ ಗುರುತಿಸುತ್ತಾರೆ. ಸದರಿ ಪತ್ರಗಳನ್ನು ನಿಪಿ-15 ಮತ್ತು 16, ಸಾಕ್ಷಿಯ ಸಹಿಗಳನ್ನು ನಿಪಿ-15(ಎ) ಮತ್ತು 16(ಎ) ಎಂದು ಗುರುತಿಸಲಾಯಿತು. ಎಂ.ಒ.1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ**

ಬಟ್ಟೆ ಮತ್ತು ರಕ್ತದ ಮಾದರಿ ಸಂಗ್ರಹಿಸಲು ದಿ.29.11.2022 ರಂದು ಹೇಳಿದ್ದರು. ನಿಪಿ-15 ಮತ್ತು 16 ನ್ನು ಓದಿದ್ದೇನೆ. ಆ ಎರಡು ಪತ್ರಗಳಲ್ಲಿ ಚಾಸಾ-2 ರವರ ಬಟ್ಟೆ ಹಾಗೂ ರಕ್ತವನ್ನು ಸಂಗ್ರಹಿಸುವಂತೆ ತಿಳಿಸಲಾಗಿತ್ತು. ನಿಪಿ-15 ರ ಎರಡನೇ ಪ್ಯಾರಾದಲ್ಲಿ ವಸಂತ್ ರವರ ಬಟ್ಟೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಪತ್ರದಂತೆ ನಾನು ಚಾಸಾ-2 ರವರ ಬಟ್ಟೆಯನ್ನು ಸಂಗ್ರಹಿಸಿ ಕೊಟ್ಟಿದ್ದೇನ ಅಥವಾ ವಸಂತ್ ರವರ ಬಟ್ಟೆ ಕೊಟ್ಟಿದ್ದೇನ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಎಂ.ಒ.1 ಕೇಸರಿ ಬಣ್ಣದ ಟೀ ಶರ್ಟ್ ಎಂದರೆ ಸರಿ. ಎಂ.ಒ.2 ಬಿಸ್ಕೇಟ್ ಕಲ್ಲರ್ ಅಲ್ಲ ಎಂದರೆ ಸರಿಯಲ್ಲ. ಎಂ.ಒ.1 ಮತ್ತು 2 ನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಅವುಗಳನ್ನು ಪೋಲಿಸರ ಒತ್ತಡದ ಮೇಲೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಒತ್ತಡದ ಮೇಲೆ ನಾನು ರಕ್ತ ಪರೀಕ್ಷೆ ಮಾಡಿದ್ದೇನೆ ಎಂದರೆ

ಸರಿಯಲ್ಲ. ನಾನು ಹೇಳಿದಂತೆ ನನಗೆ ಯಾವುದೇ ಪತ್ರಗಳು ಬಂದಿಲ್ಲ ಹಾಗೂ ನಾನು ಯಾವುದೇ ಬಟ್ಟೆಗಳನ್ನು ಸಂಗ್ರಹಿಸಿ ಕೊಟ್ಟಿಲ್ಲ ಹಾಗೂ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.